18. ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲು ಮಿಲಿಟರಿ ಬಾಲಕರ/ ಬಾಲಕಿಯರ ವಸತಿ ನಿಲಯಗಳಿಗೆ ಧನ ಸಹಾಯ

19. ಯುದ್ಧದಲ್ಲಿ/ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮಡಿದ ಯೋಧರ ಅವಲಂಬಿತರಿಗೆ ಮನೆ ದುರಸ್ತಿ ಮಾಡಲು ಧನ ಸಹಾಯ

20. ಶ್ರವಣ ಯಂತ್ರ ಮತ್ತು ಕನ್ನಡಕವನ್ನು ಖರೀದಿಸಲು ಧನ ಸಹಾಯ

21. ವೈದ್ಯಕೀಯ ಚಿಕಿತ್ಸೆಗಾಗಿ ಧನ ಸಹಾಯ

22. ಮಾಜಿ ಸೈನಿಕರಿಗಾಗಿ ಮಂಗಳೂರಿನಲ್ಲಿ ಸೈನಿಕ ವಿಶ್ರಾಂತಿ ಗೃಹವನ್ನು ಕಟ್ಟುವ ಕಾರ್ಯ ಪ್ರಗತಿಯಲ್ಲಿದೆ.

23. ವಿಜಾಪೂರದಲ್ಲಿ ಮಿಲಿಟರಿ ಬಾಲಕರ ವಿಶ್ರಾಂತಿ ಗೃಹವನ್ನು ಪ್ರಾರಂಭಿಸಲು ಯೋಚಿಸಲಾಗಿದೆ.

149 ಶ್ರೀ ಅಶೋಕ ಗುರಪ್ಪ ಶಾಬಾದಿ : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವರಹಿಪ್ಪರಗಿ–ತಾಳಿಕೋಟೆ ರಸ್ತೆಯು ಅತ್ಯಂತ ದುಸ್ಥಿತಿಯಲ್ಲಿರುವುದರಿಂದ ವಾಹನಗಳ ಸಂಚಾರಕ್ಕೆ ತುಂಬಾ ಅಡಚಣೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ರಸ್ತೆಯನ್ನು ಸುಧಾರಿಸಲು ಕೈಗೊಂಡಿರುವ ಕ್ರಮವೇನು;

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ಸದರಿ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು 47.00 ಕಿಮೀ ಉದ್ದವಿರುತ್ತದೆ. 2005–06ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054 ರಡಿಯಲ್ಲಿ ಕಿಮೀ 1.40 ರಿಂದ 10.00 ರವರೆಗೆ ಮರುಡಾಂಬರೀಕರಣಕ್ಕಾಗಿ ರೂ. 30.00 ಲಕ್ಷದ ಅಂದಾಜು ಮಂಜೂರಾಗಿದ್ದು, ಗುತ್ತಿಗೆಯನ್ನು ನಿಗದಿಪಡಿಸಿದ್ದು, ಕಾಮಗಾರಿಯನ್ನು ಮಾರ್ಚ್–07 ರೊಳಗಾಗಿ ಪೂರ್ಣಗೊಳಿಸಲಾಗುವುದು. ಅಲ್ಲದೇ ಕಿಮೀ 10.00 ರಿಂದ 16.20 ವರೆಗೆ (ಪ್ರಸ್ತಾಪಿತ ಕಿಮೀ) 10.00 ರಿಂದ 12.00 ರ ಮತ್ತು 15.00 ರಿಂದ 15.75 ಸುಧಾರಣೆಗಾಗಿ 2006–07ನೇ ಸಾಲಿನ ಲೆಕ್ಕ ಶೀರ್ಷಿಕೆ 5054 ರಡಿಯಲ್ಲಿ ರೂ. 25.00 ಲಕ್ಷದ ಅಂದಾಜು ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಅಲ್ಲದೆ ಸದರಿ ರಸ್ತೆಯ ವಾರ್ಷಿಕ ನಿರ್ವಹಣೆಗಾಗಿ ಪ್ರಸಕ್ತ ಸಾಲಿನಲ್ಲಿ ರೂ. 10.30 ಲಕ್ಷದ

ಅನುದಾನವನ್ನು ಲೆಕ್ಕ ಶೀರ್ಷಿಕೆ 3054–12 ನೇ ಹಣಕಾಸು ಅಡಿಯಲ್ಲಿ ಒದಗಿಸಲಾಗಿದ್ದು, ನಿರ್ವಹಣೆ ಕೆಲಸ ಪ್ರಗತಿಯಲ್ಲಿದೆ. ಇದರಿಂದ ರಸ್ತೆಯನ್ನು ದುರಸ್ತಿಗೊಳಿಸಿ–ಸುಗಮ ವಾಹನ ಸಂಚಾರಕ್ಕೆ ಯೋಗ್ಯವಾಗಿಡಲು ಕ್ರಮ ಕೈಗೊಳ್ಳಲಾಗಿದೆ.

813 ಶ್ರೀ ಬಾಲರಾಜ್ ಎಸ್: ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದಿಂದ ಮೈಸೂರಿಗೆ ಹೋಗುವ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ 212 ಎಂದು ಘೋಷಿಸಿ ಐದಾರು ವರ್ಷಗಳು ಕಳೆದರೂ ರಸ್ತೆ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೊಳ್ಳೇಗಾಲ, ಶ್ರೀ ಮಹದೇಶ್ವರ ಬೆಟ್ಟ ಹಾಗೂ ಬಿಳಿಗಿರಿರಂಗನಬೆಟ್ಟಕ್ಕೆ ಯಾತ್ರಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ವಾಹನಗಳವರು ಮೈಸೂರಿನಿಂದ ಆಗಮಿಸುವಾಗ ತುಂಬಾ ತೊಂದರೆ ಅನುಭವಿಸುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ;

ಇ) ಹಾಗಿದ್ದಲ್ಲಿ, ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಂದಿದೆ. 1999ನೇ ಇಸವಿಯಲ್ಲಿ ಈ ರಸ್ತೆಯನ್ನು ರಾಜ್ಯ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿಗೆ ಉನ್ನತೀಕರಿಸಲಾಗಿದೆ. ಆದರೆ ರಾಷ್ಟ್ರೀಯ ಹೆದ್ದಾರಿಗೆ ಅಗತ್ಯವಾದ ಗಟ್ಟಿ ತಳಪಾಯ (Crust thickness) ಇಲ್ಲದೆ ಇರುವುದರಿಂದ ಹಂತ ಹಂತವಾಗಿ ಮತ್ತು ಅನುದಾನದ ಲಭ್ಯತೆಗನುಸಾರವಾಗಿ ತಳಪಾಯವನ್ನು ಗಟ್ಟಿಗೊಳಿಸುವ ಕಾಮಗಾರಿ, ಅಗಲೀಕರಣ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಮೈಸೂರಿನಿಂದ ಟಿ. ನರಸೀಪುರ ಮಾರ್ಗವಾಗಿ ಕೊಳ್ಳೇಗಾಲದ ವರೆಗಿನ ರಾಷ್ಟ್ರೀಯ ಹೆದ್ದಾರಿ–212ರ ಅಭಿವೃದ್ಧಿಗೆ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.